# ರೂರಲ್ ಕಾಲೇಜು, ಕನಕಪುರ – 562117

## ರಾಷ್ಟ್ರೀಯ ಸೇವಾ ಯೋಜನೆ

## ವಾರ್ಷಿಕ ವಿಶೇಷ ಶಿಬಿರದ ವರದಿ – 2018-19

ರೂರಲ್ ಪದವಿ ಕಾಲೇಜು, ಕನಕಪುರ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಸಹಕಾರದೊಂದಿಗೆ 2018-19 ನೇ ಶೈಕ್ಷಣಿಕ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿಯ ಅರೆಕಟ್ಟೆದೊಡ್ಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಅರೆಹೊಸಹಳ್ಳಿ ಗ್ರಾಮದಲ್ಲಿ ದಿನಾಂಕ : 20-03-2019 ರಿಂದ 26-03-2019 ರವರೆಗೆ 7 ದಿನಗಳ ಕಾಲ ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ಸುಮಾರು 85 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶಿಬಿರಾಧಿಕಾರಿಯಾಗಿ ಪ್ರೊ. ಎ.ಪಿ. ಪ್ರಕಾಶ, ಸಹ ಶಿಬಿರಾಧಿಕಾರಿಗಳಾಗಿ ಶ್ರೀ ಅರುಣ್ ಕುಮಾರ್ ಜೆ. ಸಿ., ಕು. ಶೃತಿ ಎಂ., ಕನ್ನಡ ಉಪನ್ಯಾಸಕರು, ಶ್ರೀ ಜಗದೀಶ್, ಕನ್ನಡ ಉಪನ್ಯಾಸಕರು ಹಾಗೂ ಎನ್.ಎಸ್.ಎಸ್. ಗೌರವ ಸಲಹೆಗಾರರಾದ ಪ್ರೊ. ದೇವರಾಜುರವರು ಶಿಬಿರದಲ್ಲಿ ಪಾಲ್ಗೊಂಡು ಮೇಲ್ವಿಚಾರಣೆ ಮಾಡಿದರು. ಶಿಬಿರದ ನಿರ್ದೇಶಕರು ಹಾಗೂ ಪ್ರಾಂಶುಪಾಲರಾದ ಪ್ರೊ. ವಿಕ್ರಂ, ಉಪ ಪ್ರಾಂಶುಪಾಲರಾದ ಪ್ರೊ. ನಂಜುಂಡಯ್ಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳಾದ ಡಾ. ಶ್ರೀನಿವಾಸ್‌ರವರ ಮಾರ್ಗದರ್ಶನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವಿಶೇಷ ಶಿಬಿರದ 7 ದಿನಗಳ ಚಟುವಟಿಕೆಗಳಿಗೆ ಸಂಬಂಧಿಸಿದ ವರದಿ ಈ ಕೆಳಕಂಡಂತಿದೆ.

**ಶಿಬಿರದ ಮೊದಲನೆ ದಿನ :**

ದಿನಾಂಕ: 20-03-2019 ಬುಧವಾರದಂದು ಕಾಲೇಜಿನ ಬೆಳಗ್ಗಿನ ಪ್ರಾರ್ಥನೆಯಲ್ಲಿ ಭಾಗವಹಿಸಿ ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಹಾರೈಕೆ ಮತ್ತು ಪ್ರೋತ್ಸಾಹದೊಂದಿಗೆ ತೆರಳಲು ಸಜ್ಜಾಗಿ ಬಾಡಿಗೆ ವಾಹನದಲ್ಲಿ ಶಿಬಿರಾರ್ಥಿಗಳ ಜೊತೆಗೂಡಿ ಬೆಳಗ್ಗೆ 11-30 ಗಂಟೆಗೆ ಶಿಬಿರದ ಸ್ಥಳವಾದ ಅರೆಹೊಸಹಳ್ಳಿ ಗ್ರಾಮವನ್ನು ತಲುಪಿ ಪ್ರಾಥಮಿಕ ಶಾಲೆ ಮತ್ತು ದೇವಸ್ಥಾನದ ಕೊಠಡಿಗಳನ್ನು ಪಡೆದು ಸ್ವಚ್ಛಗೊಳಿಸಿ, ಮಹಿಳಾ ಮತ್ತು ಪುರುಷ ಶಿಬಿರಾರ್ಥಿಗಳಿಗೆ ಪ್ರತ್ಯೇಕವಾಗಿ ಕೊಠಡಿ ವ್ಯವಸ್ಥೆ ಮಾಡಿಕೊಡಲಾಯಿತು. ನಂತರ 7 ದಿನಗಳ ಸುಗುಮ ಕಾರ್ಯಚಟುವಟಿಕೆಗಳ ದೃಷ್ಟಿಯಿಂದ ತಂಡಗಳನ್ನು ರಚಿಸಿ ಪ್ರತಿನಿತ್ಯದ ಕಾರ್ಯಚಟುವಟಿಕೆಗಳನ್ನು ಯಶಸ್ವಿಗೊಳಿಸಲು ತಿಳಿಸಲಾಯಿತು. ಶಿಬಿರದ ಕಾರ್ಯಕ್ರಮಕ್ಕನುಗುಣವಾಗಿ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಯಿತು. ಸಂಜೆ 6-00 ರ ವೇಳೆಗೆ ಶಿಬಿರವನ್ನು ಉದ್ಘಾಟಿಸಲಾಯಿತು. ಇದರ ಅಧ್ಯಕ್ಷತೆಯನ್ನು ಗ್ರಾಮಾಂತರ ವಿದ್ಯಾ ಪ್ರಚಾರಕ ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಿ. ನಾಗರಾಜುರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗೌರವ ಕಾರ್ಯದರ್ಶಿಗಳಾದ ಶ್ರೀ ಸಿ. ರಮೇಶ್‌ರವರು, ಖಜಾಂಚಿಗಳಾದ ಶ್ರೀ ಪುಟ್ಟಸ್ವಾಮಿಗೌಡ ರವರು ಅರೆಕಟ್ಟೆದೊಡ್ಡಿ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾದ ಶ್ರೀಮತಿ ಕೆ. ಎನ್. ವೀಣಾ ನಾರಾಯಣ್, ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ದೇವಮ್ಮ, ಗ್ರಾಮದ ಮುಖಂಡರಾದ ಶ್ರೀ ಶಿವಲಿಂಗೇಗೌಡ, ಶ್ರೀ ಮುನಿಮಾದೇಗೌಡ, ಪ್ರಾಂಶುಪಾಲರಾದ ಶ್ರೀ ಎಂ. ವಿಕ್ರಮ್ ರವರು ಮತ್ತು ಕಾಲೇಜಿನ ಅಧ್ಯಾಪಕರಾದ ಪ್ರೊ. ದೇವರಾಜು, ಡಾ. ಮುಖ್ತರ್ ಪಾಷಾ ಮೊದಲಾದವರು ಉಪಸ್ಥಿತರಿದ್ದು ಉದ್ಘಾಟನೆಯನ್ನು ನೆರವೇರಿಸಿಕೊಟ್ಟರು. ನಂತರ ಕಾರ್ಯಕ್ರಮದ ಉದ್ದಕ್ಕೂ ಪ್ರೊ. ದೇವರಾಜು ರವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಲಾ ತಂಡದೊಂದಿಗೆ ಗೀತ ಗಾಯನದ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

**ಶಿಬಿರದ ಎರಡನೇ ದಿನ :**

ದಿನಾಂಕ: 21-03-2019 ರ ಗುರುವಾರ ಬೆಳಿಗ್ಗೆ 5-30 ಗಂಟೆಗೆ ಎದ್ದು ಪ್ರಾತ ವಿದಿಗಳನ್ನು ಮುಗಿಸಿ 6-15 ಕ್ಕೆ ಎನ್.ಎಸ್.ಎಸ್ ಧ್ವಜಾರೋಹಣ ಪ್ರತಿಜ್ಞಾ ವಿಧಿಯನ್ನು ಬೋಧಿಸಿ ಎನ್.ಎಸ್.ಎಸ್. ಗೀತೆಯನ್ನು ಹಾಡಿಸಲಾಯಿತು. ಬೆಳಗಿನ ಉಪಹಾರವನ್ನು ಮುಗಿಸಿದ ನಂತರ ಬೆಳಿಗ್ಗೆ 9-00 ಗಂಟೆಗೆ ಮಿಶ್ರ ತಳಿ ಕರುಗಳ ಪ್ರದರ್ಶನ ಮತ್ತು ಉಚಿತ ಪಶು ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಇದರ ನೇತೃತ್ವವನ್ನು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ಕನಕಪುರ. ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ, ಕನಕಪುರ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘ, ಅರೆಹೊಸಹಳ್ಳಿ ವಹಿಸಿತ್ತು. ಡಾ|| ಎಲ್. ವರದರಾಜು ಕುಮಾರ್, ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ರಾಮನಗರ, ಡಾ|| ಕುಮಾರ್ ಯು. ಸಿ., ಸಹಾಯಕ ನಿರ್ದೇಶಕರು, ಪಶು ವೈದ್ಯ ಇಲಾಖೆ, ಕನಕಪುರ, ಪಶು ವೈದ್ಯಾಧಿಕಾರಿಗಳಾದ ಡಾ|| ಎಸ್. ನಿಂಗರಾಜಯ್ಯ, ಡಾ|| ಹರಿಣಿ ಎಚ್., ಡಾ|| ತಾಹೀರ್ ಅಹಮದ್ ರವರ ಸಹಕಾರದೊಂದಿಗೆ ಯಶಸ್ವಿಗೊಳಿಸಲಾಯಿತು. ಶಿಬಿರದ ಕೇಂದ್ರಕ್ಕೆ ಅರೆಹೊಸಹಳ್ಳಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಿಂದ 50 ಮಿಶ್ರ ತಳಿ ಕರುಗಳು ಪ್ರದರ್ಶನದಲ್ಲಿ ಭಾಗವಹಿಸಿದ್ದವು. ಉತ್ತಮ ಕರುಗಳಿಗೆ ಬಹುಮಾನವನ್ನು ಪಶು ವೈದ್ಯ ಇಲಾಖಾ ವತಿಯಿಂದ ವಿತರಿಸಲಾಯಿತು. ನಂತರ ಇತರೆ ರಾಸುಗಳಿಗೆ ಆರೋಗ್ಯ ತಪಾಸಣೆ ಮಾಡಿ ಉಚಿತವಾಗಿ ಪಶು ಔಷಧಿಗಳನ್ನು ವಿತರಿಸಲಾಯಿತು. ಜೊತೆಗೆ ಮಿಶ್ರ ತಳಿ ಕರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾಕುವಂತೆ ಪ್ರೇರೆಪಿಸಲಾಯಿತು.

ಅದೇ ದಿನ ಬೆಳಿಗ್ಗೆ 9-00 ರಿಂದ ಮಧ್ಯಾಹ್ನ 1-00 ಗಂಟೆಯವರೆಗೆ ಶಿಬಿರಾರ್ಥಿಗಳು ಗ್ರಾಮದ ಚರಂಡಿಯಲ್ಲಿರುವ ಹೂಳನ್ನು ತೆಗೆದು ಸ್ವಚ್ಛಗೊಳಿಸಿ ಶ್ರಮಧಾನವನ್ನು ನೇರವೇರಿಸಿದರು. ನಂತರ ಮಧ್ಯಾಹ್ನದ ಉಪಹಾರವನ್ನು ಮುಗಿಸಿ ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಪಡೆದರು. ಮಧ್ಯಾಹ್ನ 3-00 ಗಂಟೆಗೆ 'ಭಾರತ ನನ್ನ ಮಾತೃಭೂಮಿ' ಎಂಬ ವಿಷಯಕ್ಕೆ ರೂರಲ್ ಪದವಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ತಿಮ್ಮೇಗೌಡ ವಿಶೇಷ ಉಪನ್ಯಾಸವನ್ನು ನಡೆಸಿಕೊಡುವುದರ ಮೂಲಕ ದೇಶಾಭಿಮಾನದ ಕಿಚ್ಚನ್ನು ಹೆಚ್ಚಿಸಿ ಶಿಬಿರಾರ್ಥಿಗಳ ಜೊತೆ ಸಂವಾದವನ್ನು ನಡೆಸಿದರು. ನಂತರ ಶಿಬಿರಾರ್ಥಿಗಳು ಚಹಾ ವಿರಾಮವನ್ನು ತೆಗೆದುಕೊಂಡು ಸಂಜೆಯ ಕಾರ್ಯಕ್ರಮಕ್ಕೆ ವೇದಿಕೆಯನ್ನು ಸಿದ್ಧಪಡಿಸಿಕೊಂಡರು.

ಸಾಯಂಕಾಲ 6-30 ಗಂಟೆಗೆ "ರೇಷ್ಮೆ ಕೃಷಿಯಲ್ಲಿ ಇತ್ತಿಚೀನ ತಾಂತ್ರಿಕತೆ" ಎಂಬ ವಿಷಯದ ಮೇಲೆ ಕಾರ್ಯಕ್ರಮ ಪ್ರಾರಂಭವಾಯಿತು. ಶಿಬಿರಾರ್ಥಿಗಳು ವೇದಿಕೆಯಲ್ಲಿದ್ದ ಗಣ್ಯರನ್ನು ಆಹ್ವಾನಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಲರಾಮು, ನಿರ್ದೇಶಕರು, ಆರ್.ಇ.ಎಸ್., ಕನಕಪುರ ವಹಿಸಿದ್ದರು. ಶ್ರೀ ರವೀಂದ್ರನಾಥ್ ಕೆ.ವಿ., ರೇಷ್ಮೆ ನಿರೀಕ್ಷಕರು, ಸಾತನೂರು ಮುಖ್ಯ ಅತಿಥಿಗಳಾಗಿ ಅಹ್ವಾನಿಸಿ, ರೇಷ್ಮೆ ಕೃಷಿಯಲ್ಲಿ ತಂತ್ರಜ್ಞಾನದ ಅಳವಡಿಕೆಯಿಂದ ಕೃಷಿಕರಿಗೆ ಆಗಬಹುದಾದ ಅನುಕೂಲಗಳ ಬಗ್ಗೆ ಹಾಗೂ ಇಲಾಖೆ ವತಿಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ತಿಳಿಸಿದ್ದರು. ನಂತರ ಶಿಬಿರಾರ್ಥಿಗಳು ಮತ್ತು ಗ್ರಾಮದ ರೇಷ್ಮೆ ಕೃಷಿಕರೊಂದಿಗೆ ಸಂವಾದ ನಡೆಸಿ, ರೇಷ್ಮೆ ಗೂಡಿನ ಮಾರುಕಟ್ಟೆ, ಅದರ ಬೆಲೆಗಳ ಬಗ್ಗೆ ತಿಳುವಳಿಕೆ ನೀಡಿದರು. ಗ್ರಾಮದ ಮುಖಂಡರಾದ ಶ್ರೀ ಶಿವಲಿಂಗೇಗೌಡರವರು ಮಾತನಾಡಿ ಶಿಬಿರದ ಅವಧಿಯಲ್ಲಿ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗವನ್ನು ಪಡಿಸಿಕೊಂಡು ಅದರಂತೆ ಮುಂದೆ ಅನುಸರಿಸಬೇಕೆಂದು ತಿಳಿಸಿದರು. ನಂತರ ಗ್ರಾಮಸ್ಥರಿಂದ ರಂಗಗೀತೆ, ಜನಪದ ಗೀತೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

**ಶಿಬಿರದ ಮೂರನೇ ದಿನ :**

ದಿನಾಂಕ: 22-03-2019 ರ ಶುಕ್ರವಾರ ಬೆಳಿಗ್ಗೆ ಪ್ರಾತಃವಿಧಿಗಳನ್ನು ಮುಗಿಸಿ ಧ್ವಜಾರೋಹಣವನ್ನು ನೆರವೇರಿಸಿ ರಾಷ್ಟ್ರಗೀತೆಯನ್ನು ಹಾಡಲಾಯಿತು. ಸ್ವಲ್ಪ ಹೊತ್ತು ವ್ಯಾಯಾಮ ಮಾಡಿ ಬೆಳೆಗಿನ ಉಪಹಾರವನ್ನು ಸೇವಿಸಿ ಶಿಭಿರಾರ್ಥಿಗಳು ಆ ದಿನದ ಚಟುವಟಿಕೆಗಳನ್ನು ನಿರ್ವಹಿಸಲು ಸಜ್ಜಾದರು. ಬೆಳಿಗ್ಗೆ 9-00 ಗಂಟೆಯಿಂದ ಮಧ್ಯಾಹ್ನ 1-00 ಗಂಟೆಯವರೆಗೆ ಗ್ರಾಮದ ಚರಂಡಿಯಲ್ಲಿದ್ದ ಹೂಳನ್ನು ತೆಗೆದು ಸ್ವಚ್ಛಗೊಳಿಸಿ ಶ್ರಮಧಾನವನ್ನು ಮಾಡಿದರು. ನಂತರ ಕೆಲವು ಶಿಬಿರಾರ್ಥಿಗಳು

ಹೋಳಿ ಹಬ್ಬದ ಪ್ರಯುಕ್ತ ಒಬ್ಬರಿಗೊಬ್ಬರು ಬಣ್ಣದ ಹೋಕುಳಿಯನ್ನು ಎರಚಿ ಸಂಭ್ರಮಿಸಿದರು. ಮಧ್ಯಾಹ್ನದ ಉಪಹಾರವನ್ನು ಮುಗಿಸಿ ಸ್ವಲ್ಪ ಹೊತ್ತು ವಿಶ್ರಮಿಸಿದರು.

ಮಧ್ಯಾಹ್ನ 3-00 ಗಂಟೆಗೆ "ರಾಷ್ಟ್ರ ರಕ್ಷಣೆಯಲ್ಲಿ ಯುವಜನತೆಯ ಪಾತ್ರ" ಎಂಬ ವಿಷಯಕ್ಕೆ ಕಾಲೇಜಿನ ಹಿರಿಯ ವಿದ್ಯಾರ್ಥಿ, ಚರ್ಚಾಪಟು ಹಾಗೂ ಎಪಿಜೆ ವಿಜ್ಞನ್ & ಮಿಜ್ಞನ್ ಟ್ರಸ್ಟ್ ಸಂಯೋಜಕರಾದ ಶ್ರೀ ಶಿವಮಾದಯ್ಯರವರು ಉಪನ್ಯಾಸ ನೀಡಿ ವಿದ್ಯಾರ್ಥಿಗಳ ಜೊತೆ ಸಂವಾದವನ್ನು ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಬಿ. ಎಂ. ಶ್ರೀನಿವಾಸ ಉಪಸ್ಥಿತರಿದ್ದರು. ಶಿಬಿರಾರ್ಥಿಗಳಿಗೆ ಹಣ್ಣುಗಳನ್ನು ವಿತರಿಸಿದರು. ನಂತರ ಶಿಬಿರಾರ್ಥಿಗಳು ಚಹಾ ವಿರಾಮ ತೆರಳಿ ಸಂಜೆಯ ವೇದಿಕೆಯನ್ನು ಸಿದ್ಧಗೊಳಿಸಲು ಅಣಿಯಾದರು.

ಸಂಜೆ 6-00 ಗಂಟೆಗೆ ಕನಕಪುರ ವಕೀಲರ ಸಂಘ ಮತ್ತು ತಾಲ್ಲೂಕು ಕಾನೂನು ಸೇವಾ ಸಮಿತಿಯ ಸಹಕಾರದೊಂದಿಗೆ ವಿಶ್ವಗ್ರಾಹಕರ ದಿನ ಮತ್ತು ವಿಶ್ವಜಲದಿನದ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೌರವಾನ್ವಿತ ಶ್ರೀ ಹನುಮಂತ ಜಿ. ಹೆಚ್. ಪ್ರಧಾನ ಸಿವಿಲ್ ನ್ಯಾಯಾಧೀಶರು, ಜೆ.ಎಂ.ಎಫ್.ಸಿ., ಕನಕಪುರ ವಹಿಸಿದ್ದರು. ಉದ್ಘಾಟನೆಯನ್ನು ಗೌರವಾನ್ವಿತ ಶ್ರೀ ಡಿ. ವೇಣುಗೋಪಾಲ, ಹಿರಿಯ ಸಿವಿಲ್ ನ್ಯಾಯಾಧೀಶರು, ಜೆ.ಎಂ.ಎಫ್.ಸಿ., ಕನಕಪುರ ಮತ್ತು ವಕೀಲರ ಸಂಘದ ಪದಾಧಿಕಾರಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಭ್ರೂಣ ಹತ್ಯೆ, ಲೈಂಗಿಕ ದೌರ್ಜನ್ಯ, ಅತ್ಯಾಚಾರ ಮೊದಲಾದವುಗಳ ಬಗ್ಗೆ ಮಾನ್ಯ ನ್ಯಾಯಾಧೀಶರುಗಳು ಗ್ರಾಮಸ್ಥರುಗಳಿಗೆ ಮತ್ತು ಶಿಬಿರಾರ್ಥಿಗಳಿಗೆ ಕಾನೂನು ಅರಿವು ಮೂಡಿಸಿದರು. ನಂತರ ವಕೀಲರಾದ ಶ್ರೀ ಕಾಮೇಶ್‌ರವರು "ಗ್ರಾಹಕರ ಹಿತರಕ್ಷಣೆ ಮತ್ತು ಕಾನೂನು" ಅಡಿಯಲ್ಲಿ ಉಪನ್ಯಾಸ ನೀಡಿ ಗ್ರಾಹಕರಿಗೆ ಇರಬೇಕಾದ ತಿಳುವಳಿಕೆ ಕಾನೂನು ರಕ್ಷಣೆ, ಗ್ರಾಹಕ ಮತ್ತು ಮಾರಾಟಗಾರರ ಸಂಬಂಧಗಳ ಬಗ್ಗೆ ತಿಳಿಸಿದರು. ಶ್ರೀ ಎಲ್. ಪುಟ್ಟಮಾದಯ್ಯ, ವಕೀಲರು, "ಜಲ ಸಂರಕ್ಷಣೆ ಮತ್ತು ಕಾನೂನು" ಬಗ್ಗೆ ಉಪನ್ಯಾಸ ನೀಡಿ ಜಲದ ಮೌಲ್ಯ ಅದರ ಬಳಕೆಯಲ್ಲಿರಬೇಕಾದ ವಿವೇಚನೆಗಳ ಬಗ್ಗೆ ತಿಳುವಳಿಕೆ ನೀಡಿದರು. ಮತ್ತೊಬ್ಬ ವಕೀಲರಾದ ಶ್ರೀ ಕೆ. ಪ್ರಕಾಶ್‌ರವರು "ಜನನ ಮತ್ತು ಮರಣ ನೊಂದಣಿ" ಎಂಬ ವಿಷಯಕ್ಕೆ ಉಪನ್ಯಾಸ ನೀಡಿ ಇದರೊಂದಾಗುವ ಪ್ರಯೋಜನಗಳ ಬಗ್ಗೆ ತಿಳುವಳಿಕೆ ನೀಡಿದರು. ನಂತರ ಶಿಬಿರಾರ್ಥಿಗಳು ಮತ್ತು ಗ್ರಾಮದ ವಿದ್ಯಾವಂತ ಯುವಕರ ಜೊತೆ ಸಂವಾದ ನಡೆಸಿದರು. ಕಾನೂನು ಸೇವಾ ಸಮಿತಿಯ ಅನೇಕ ಸದಸ್ಯರು ಈ ಸಂದರ್ಭದಲ್ಲಿ ಹಾಜರಿದ್ದು ಕಾರ್ಯಕ್ರಮದ ಯಶಸ್ವಿಗೆ ನೆರವಾದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರು ಹಾಗೂ ರೈತ ಮುಖಂಡರಾದ ಶ್ರೀ ಕೆ. ಬಿ. ನಾಗರಾಜುರವರು ಉಪಸ್ಥಿತರಿದ್ದರು.

**ಶಿಬಿರದ ನಾಲ್ಕನೇ ದಿನ :**

ದಿನಾಂಕ: 23-03-2019 ರ ಶನಿವಾರದಂದು ಬೆಳಗ್ಗೆ ಎಂದಿನಂತೆ ನಿತ್ಯಕರ್ಮಗಳನ್ನು ಮುಗಿಸಿ, ಗ್ರಾಮಪಂಚಾಯಿತಿ ಸದಸ್ಯರಾದ ಶ್ರೀಮತಿ ದೇವಮ್ಮ ಮತ್ತು ರೂರಲ್ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಕರಾದ ಶ್ರೀ ನವೀನ್ ರವರಿಂದ ಧ್ವಜಾರೋಹಣವನ್ನು ನೆರವೇರಿಸಿ ರಾಷ್ಟ್ರಗೀತೆಯನ್ನು ಮಾಡಲಾಯಿತು. ನಂತರ ಶಿಬಿರಾರ್ಥಿಗಳಿಗೆ ಆರೋಗ್ಯಕ್ಕಾಗಿ ವ್ಯಾಯಾಮ ಎಂಬ ಶೀರ್ಷಿಕೆಯಡಿಯಲ್ಲಿ ಅನೇಕ ವ್ಯಾಯಾಮಗಳ ತರಬೇತಿಯನ್ನು ನೀಡಿ ಅದರಿಂದಾಗುವ ಪ್ರಯೋಜನಗಳ ಬಗ್ಗೆ ದೈಹಿಕ ಶಿಕ್ಷಕರಾದ ಶ್ರೀ ನವೀನ್‌ರವರು ತಿಳಿಸಿಕೊಟ್ಟರು. ನಂತರ ತಿಂಡಿಯನ್ನು ಮುಗಿಸಿ ಮೂರು ಶಿಬಿರಾರ್ಥಿಗಳ ತಂಡ ಶ್ರಮದಾನದ ಕಡೆ ತೆರಳಿದರೆ ಇನ್ನುಳಿದ ನಾಲ್ಕು ತಂಡಗಳು ಆ ದಿನ ನಡೆಯುವ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಆಗಮಿಸಲಿರುವ ವೈದ್ಯಾಧಿಕಾರಿಗಳ ತಂಡಕ್ಕೆ ಆಸನದ ವ್ಯವಸ್ಥೆ ಕಲ್ಪಿಸಿಕೊಟ್ಟರು ಮತ್ತು ಅವರಿಗೆ ತಿಂಡಿ ವ್ಯವಸ್ಥೆಯನ್ನು ಮಾಡಿಕೊಟ್ಟು ಉಪಚರಿಸಿದರು.

ಬೆಳಗ್ಗೆ 10-00 ಗಂಟೆಗೆ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆ ಶಿಬಿರವು ಕೆಂಪೇಗೌಡ ಮೆಡಿಕಲ್ ಸರ್ವೀಸ್ ಟ್ರಸ್ಟ್ ಮತ್ತು ಕಿದ್ವಾಯ್ ಸ್ಮಾರಕ ಕ್ಯಾನ್ಸರ್ ಸಂಸ್ಥೆ, ಬೆಂಗಳೂರು ಸಹಕಾರದೊಂದಿಗೆ ಆರಂಭಗೊಂಡಿತ್ತು. ಇದರ ನೇತೃತ್ವವನ್ನು ರೋಟರಿ ಕ್ಲಬ್, ಕನಕಪುರ ವಹಿಸಿತ್ತು. ಮೂರು ದಿನಗಳ ಮೊದಲೆ ಆರೋಗ್ಯ ಶಿಬಿರದ ಬಗ್ಗೆ ಶಿಬಿರದ ಸ್ಥಳ ಮತ್ತು ಅದರ ಸುತ್ತಮುತ್ತಲಿನ ಹಳ್ಳಿಗಳಿಗೆ ಶಿಬಿರಾರ್ಥಿಗಳು ಪಾಂಪ್‌ಲೆಟ್ಸ್‌ಗಳನ್ನು ಹಂಚಿಕೆ ಮತ್ತು ದಿನಪತ್ರಿಕೆಗಳಲ್ಲಿ ಪ್ರಕಟಿಸಿದಿದ್ದುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಆರೋಗ್ಯ ತಪಾಸಣೆಗೆ ಸಾರ್ವಜನಿಕರು ಬಂದಿದ್ದರು. ಕ್ಯಾನ್ಸರ್ ತಪಾಸಣೆ ವಿಶೇಷವಾಗಿ ಮಹಿಳೆಯರಿಗೆ ನಡೆಸಲಾಯಿತು. ಸಾಮಾನ್ಯ ಆರೋಗ್ಯ ಸಮಸ್ಯೆಗಳಾದ ಜ್ವರ, ತಲೆನೋವು, ಕೀಲುನೋವು,

ರಕ್ತದ ಒತ್ತಡ, ರಕ್ತ ಪರೀಕ್ಷೆ, ನೇತ್ರ ತಪಾಸಣೆ ಮೊದಲಾದವುಗಳನ್ನು ನಡೆಸಿ ಸ್ಥಳದಲ್ಲಿಯೇ ಔಷಧಿಗಳನ್ನು ವಿತರಿಸಲಾಯಿತು. ಗಂಭೀರ ಸಮಸ್ಯೆ ಇರುವವರಿಗೆ ಬೆಂಗಳೂರಿಗೆ ಕರೆದುಕೊಂಡು ಹೋಗಿ ಉಚಿತವಾಗಿ ಆರೋಗ್ಯ ಸೌಲಭ್ಯದ ವ್ಯವಸ್ಥೆಯನ್ನು ಮಾಡಿಕೊಡಲಾಯಿತು. ಅಲ್ಲದೆ, ವೈದ್ಯಾಧಿಕಾರಿಗಳು ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು ಸ್ಥಳದಲ್ಲೇ ನೀಡಿದರು. ಸುಮಾರು 200 ಕ್ಕಿಂತ ಹೆಚ್ಚಿನ ಜನರು ಇದರ ಲಾಭವನ್ನು ಪಡೆದುಕೊಂಡರು.

ಅದೇ ದಿನ ಶಿಬಿರಾರ್ಥಿಗಳು ಮತ್ತು ಸುತ್ತಮುತ್ತಲಿನ ಯುವಕರಲ್ಲಿ ರಕ್ತದಾನದ ಬಗ್ಗೆ ಅರಿವು ಮೂಡಿಸಲು ರಕ್ತದಾನ ಶಿಬಿರವನ್ನು ಎನ್.ಎಸ್.ಎಸ್. ಶಿಬಿರದಲ್ಲಿ ಇದೇ ಮೊದಲ ಭಾರಿಗೆ ಹಮ್ಮಿಕೊಳ್ಳಲಾಗಿತ್ತು. ಬೆಂಗಳೂರಿನ ಮಿಲೇನಿಯನ್ ಬ್ಲಡ್ ಬ್ಯಾಂಕ್ ಇದರ ನೇತೃತ್ವವನ್ನು ವಹಿಸಿಕೊಂಡು ಸುಮಾರು 50 ಕ್ಕಿಂತ ಹೆಚ್ಚಿನ ಯೂನಿಟ್‌ಗಳ ರಕ್ತವನ್ನು ಸ್ವಯಂ ಪ್ರೇರಿತ ಶಿಬಿರಾರ್ಥಿಗಳು ಮತ್ತು ಗ್ರಾಮದ ಯುವಕರಿಂದ ಸಂಗ್ರಹಿಸಲಾಯಿತು. ಶಿಬಿರಕ್ಕೆ ಬಂದಿದ್ದ ಎಲ್ಲಾ ವೈದ್ಯಾಧಿಕಾರಿಗಳ ತಂಡಗಳಿಗೆ ಊಟೋಪಾಚಾರ ಮಾಡಿ ಗೌರವಿಸಿ, ಬೀಳ್ಕೊಡಲಾಯಿತು.

ಮಧ್ಯಾಹ್ನ 3-00 ಗಂಟೆಗೆ ಕನಕಪುರದ ರೋಟರಿ ಕ್ಲಬ್‌ನ ಅಧ್ಯಕ್ಷರಾದ ಶ್ರೀ ದೊಡ್ಡಬೈರೇಗೌಡ, ಕಾರ್ಯದರ್ಶಿಗಳಾದ ಶ್ರೀ ರವಿಕುಮಾರ್, ಮಾಜಿ ಆಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಭಾನು ಪ್ರಕಾಶ್, ಸದಸ್ಯರಾದ ಶ್ರೀ ನಟೇಶ್‌ರವರು ಶಿಬಿರಾರ್ಥಿಗಳ ಜೊತೆ ಸಂವಾದವನ್ನು ನಡೆಸಿ, ಎನ್.ಎಸ್.ಎಸ್. ಕಾರ್ಯಕ್ರಮದ ಅಡಿಯಲ್ಲಿ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ತಿಳಿಸಿ ನಿಮ್ಮೊಂದಿಗೆ ರೋಟರಿ ಕ್ಲಬ್ ಯಾವಾಗಲು ಸಹಕರಿಸಲು ಬದ್ಧವಾಗಿದೆ ಎಂದರು.

ಮಧ್ಯಾಹ್ನ 3-30 ಗಂಟೆಗೆ ಬಾಪು 150 ನೇ ಜನ್ಮದಿನಾಚರಣೆಯ ಅಂಗವಾಗಿ "ಗಾಂಧೀಜಿಯವರ ಚಿಂತನೆಗಳು" ಎಂಬ ವಿಷಯಕ್ಕೆ ಡಾ. ಅಬೀದ ಬೇಗಂ, ದೈಹಿಕ ಶಿಕ್ಷಕ ನಿರ್ದೇಶಕರು, ಸರ್ಕಾರಿ ಮಹಿಳಾ ಕಾಲೇಜು, ರಾಮನಗರ ಉಪನ್ಯಾಸ ನಡೆಸಿಕೊಟ್ಟರು. ಗಾಂಧೀಜಿಯವರ ಸಾಮಾಜಿಕ ಮತ್ತು ಆರ್ಥಿಕ ಚಿಂತನೆಗಳನ್ನು ಮೈಗೂಡಿಸಿಕೊಂಡು ಯುವಕರು ಈ ದೇಶದ ಅಭಿವೃದ್ಧಿಗೆ ನೆರವಾಗಬೇಕೆಂದು ತಿಳಿಸಿದರು. ನಂತರ ಸಂವಾದವನ್ನು ನಡೆಸಿ, ಚಹಾ ವಿರಾಮಕ್ಕೆ ತೆರಳಿ ಸಂಜೆಯ ಕಾರ್ಯಕ್ರಮಕ್ಕೆ ಅಣಿಯಾದರು.

ಸಂಜೆ 6-00 ಗಂಟೆಗೆ ಸರಿಯಾಗಿ ಸುಧಾರಿತ ಕೃಷಿ ಬೆಳೆಗಳ ತಳಿಗಳು ಮತ್ತು ಇಳುವರಿ ಹಾಗೂ ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಕುರಿತ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರ್.ಇ.ಎಸ್. ನ ನಿರ್ದೇಶಕರಾದ ಶ್ರೀ ಪುಟ್ಟಸ್ವಾಮಿಗೌಡರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೃಷಿ ಇಲಾಖೆಯ ಅಧಿಕಾರಿಯಾದ ರಘು ಟಿ. ಎನ್. ರವರು ಸುಧಾರಿತ ಕೃಷಿ ಬೆಳೆಗಳ ತಳಿಗಳ ಬಳಕೆಯಿಂದ ಹೆಚ್ಚಿನ ಇಳುವರಿಯನ್ನು ಪಡೆಯಲು ಹೇಗೆ ಸಹಕಾರಿಯಾಗುತ್ತದೆ ಎಂಬುವುದರ ಬಗ್ಗೆ ತಿಳಿಸಿ ರೈತರು ಇಂತಹ ತಳಿಗಳ ಬಳಕೆಗಳ ಬಗ್ಗೆ ಹಚ್ಚು ಆಸಕ್ತಿಯನ್ನ ವಹಿಸಬೇಕು ಹಾಗೂ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳನ್ನು ಪಡೆಯಲು ಮುಂದಾಗಬೇಕೆಂದು ತಿಳಿಸಿದರು. ಮುಖ್ಯ ಅತಿಥಿಗಳಾಗ ಆಗಮಿಸಿದ ಶ್ರೀ ಚಿಕ್ಕಲಿಂಗೇಗೌಡ, ನಿವೃತ್ತ ಇಂಜಿನಿಯರ್, ಕೆ.ವಿ.ಮಂ., ಚುಟುಕು ಕವನಗಳ ಮುಖಾಂತರ ತಂದೆ, ತಾಯಿ, ಹಿರಿಯರು ಮತ್ತು ನಾಡಿನ ನೆಲದ ಮೇಲೆ ಹೇಗೆ ಗೌರವವನ್ನು ತೋರಿಸಬೇಕೆಂದು ತಿಳಿಸಿ ನೆರದಿದ್ದ ಶಿಬಿರಾರ್ಥಿಗಳು ಮತ್ತು ಗ್ರಾಮಾಸ್ಥರಿಂದ ಚಪ್ಪಾಳೆಯನ್ನು ಗಿಟ್ಟಿಸಿ ಮೆಚ್ಚುಗೆಗೆ ಪಾತ್ರರಾದರು. ನಂತರ ಮೊತ್ತೊಬ ಅತಿಥಿಯಾದ ನಿವೃತ್ತ ಸರ್ವೆ ಅಧಿಕಾರಿಗಳಾದ ಶ್ರೀ ಕೃಷ್ಣಪ್ಪನವರು ಜಮೀನು ಮೋಜಣಿ ಮತ್ತು ಪೋತಿ ಖಾತೆಗಳನ್ನು ಮಾಡಿಸಿಕೊಳ್ಳುವುದರ ಬಗ್ಗೆ ಗ್ರಾಮಸ್ಥರಿಗೆ ಮಾಹಿತಿ ನೀಡಿದರು. ಸಾತನೂರು ರೂರಲ್ ಪಿ.ಯು ಕಾಲೇಜಿನ ಉಪನ್ಯಾಸಕರು ಹಾಗೂ ಎನ್.ಎಸ್.ಎಸ್. ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ್‌ರವರು ಶಿಬಿರಕ್ಕೆ ಶುಭವನ್ನು ಕೋರಿದರು.

ಈ ಕಾರ್ಯಕ್ರಮದ ಮಧ್ಯದಲ್ಲಿ ಆಗಾಗ್ಗೆ ನಮ್ಮ ಕಾಲೇಜಿನ ಹಿರಿಯ ಎನ್.ಎಸ್.ಎಸ್ ಸ್ವಯಂ ಸೇವಕರು ಹಾಗೂ ಉಪನ್ಯಾಸಕರು ನಗೆಮಳೆ ರಾಜ ಎಂಬ ಖ್ಯಾತಿಯ ಶ್ರೀ ಸಿ. ಚಂದ್ರಾಜ್ ಮತ್ತು ಶ್ರೀ ಹೊಳಸಾಲಯ್ಯ ಧಾನವ್ ರವರು ಜನಪದ ಗೀತೆ, ಚುಟುಕು, ಹಾಸ್ಯಕವನಗಳನ್ನು ಗ್ರಾಮೀಣ ಶೈಲಿಯಲ್ಲಿ ನಡೆಸುವುದರ ಮೂಲಕ ಇಡೀ ವೇದಿಕೆಯಲ್ಲಿದ್ದ

ಗಣ್ಯರು, ಶಿಬಿರಾರ್ಥಿಗಳು ಹಾಗೂ ನೆರದಿದ್ದ ಸಮಸ್ತ ಗ್ರಾಮಸ್ಥರನ್ನು ನಗೆಗಡಲಲ್ಲಿ ಮುಳುಗಿಸಿ ಜನ ಮೆಚ್ಚುಗೆಗೆ ಪಾತ್ರರಾದರು.

**ಶಿಬಿರದ ಐದನೇ ದಿನ :**

ದಿನಾಂಕ: 24-03-2019 ಭಾನುವಾರ ಬೆಳಗ್ಗೆ ಎಂದಿನಂತೆ ಪ್ರಾತಃವಿಧಿಗಳನ್ನು ಮುಗಿಸಿ, ನಂತರ ಧ್ವಜಾರೋಹಣವನ್ನುಯ ಗ್ರಾಮದ ಮುಖಂಡರಿಂದ ನೆರವೇರಿಸಿ, ಪ್ರಾರ್ಥನೆಯನ್ನು ಮಾಡಲಾಯಿತು. ನಂತರ ಶಿಬಿರಾರ್ಥಿಗಳು ಸ್ವಲ್ಪ ಹೊತ್ತು ವ್ಯಾಯಾಮವನ್ನು ಮಾಡಿ ನಂತರ ಬೆಳಗಿನ ಉಪಹಾರವನ್ನು ಮುಗಿಸಿ, ಗ್ರಾಮದ ಬೀದಿಗಳ ಚರಂಡಿಯಲ್ಲಿನ ಹೂಳನ್ನು ತೆಗೆದು ಸ್ವಚ್ಛಗೊಳಿಸುವ ಕಾರ್ಯದಲ್ಲಿ ನಿರತರಾದರು. ಅಂದು ಬೆಳಗ್ಗೆ ನಡೆಯಬೇಕಾಗಿದ್ದ ಸಸಿ ನೆಡುವ ಕಾರ್ಯಕ್ರಮವನ್ನು ಕಾರಣಾಂತರಗಳಿಂದ ರದ್ದು ಪಡಿಸಲಾಯಿತು. ಇದಕ್ಕೆ ಬದಲಾಗಿ ಸಂಜೆಯ ಕಾರ್ಯಕ್ರಮದಲ್ಲಿ ಸಸಿ ವಿತರಣೆ ಮಾಡಲಾಯಿತು. ಮಧ್ಯಾಹ್ನ 1-00 ಗಂಟೆಯವರೆಗೆ ಶ್ರಮಧಾನ ಮಾಡಿದ ಶಿಬಿರಾರ್ಥಿಗಳು ಉಪಹಾರವನ್ನು ಮುಗಿಸಿ ವಿಶ್ರಮಿಸಿದರು. ಮಧ್ಯಾಹ್ನ 3-00 ಗಂಟೆಗೆ "ಅಪರಾಧ ತಡೆಯುವಲ್ಲಿ ಯುವಜನರ ಪಾತ್ರ" ಎಂಬ ವಿಷಯಕ್ಕೆ ವಕೀಲರು ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ಶ್ರೀ ಸಿದ್ಧರಾಜುರವರು ಉಪನ್ಯಾಸವನ್ನು ನೀಡಿ ಶಿಬಿರಾರ್ಥಿಗಳ ಜೊತೆ ಸಂವಾದವನ್ನು ನಡೆಸಿ ವಿಶೇಷವಾಗಿ ಹೆಣ್ಣುಮಕ್ಕಳ ರಕ್ಷಣೆಗಿರುವ ಕಾನೂನು ನೆರವುಗಳ ಬಗ್ಗೆ ತಿಳಿಸಿಕೊಟ್ಟರು. ನಂತರ ಚಹಾ ವಿರಾಮವನ್ನು ತೆಗೆದುಕೊಂಡು ಶಿಬಿರಾರ್ಥಿಗಳು ಮನೆ-ಮನೆಗೂ ಹೋಗಿ ಸಸಿಗಳನ್ನು ವಿತರಿಸಿದರು.

ಸಂಜೆ 6-00 ಗಂಟೆಗೆ ಕಾಡ್ಗಿಚ್ಚು ಮತ್ತು ವನ್ಯ ಜೀವಿಗಳ ಹಾವಳಿಯನ್ನು ನಿಯಂತ್ರಿಸುವ ಕ್ರಮಗಳು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಸ್ಥೆ ಕುರಿತಾದ ಕಾರ್ಯಕ್ರಮದ ಜೊತೆಗೆ ಶ್ರೀಗಂಧ ಮತ್ತು ರಕ್ತ ಚಂದನ ಅರಣ್ಯ ಕೃಷಿಯಿಂದ ರೈತರಿಗಾಗುವ ಪ್ರಯೋಜನಗಳ ಕುರಿತು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರ್.ಇ.ಎಸ್. ನ ಅಧ್ಯಕ್ಷರು ಹಾಗೂ ರೈತ ಮುಖಂಡರಾದ ಶ್ರೀ ಕೆ. ಬಿ. ನಾಗರಾಜುರವರು ವಹಿಸಿದ್ದರು. ರಾಜ್ಯ ಶ್ರೀಗಂಧ ಮತ್ತು ರಕ್ತಚಂದನ ಬೆಳೆಗಾರರ ಸಂಘದ ಅಧ್ಯಕ್ಷರು ಹಾಗೂ ನಮ್ಮ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು, ಕಲಾವಿದರು, ಗಾಯಕರು ಆದ ಕನ್ನಡ ಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿ ರೈತರು ಕೇವಲ ಸಾಂಪ್ರಾದಾಯಕ ಬೆಳೆಗಳ ಕೃಷಿಗೆ ಸೀಮಿತವಾಗದೆ, ಅತ್ಯಂತ ಲಾಭದಾಯಕವಾಗಿರುವ ಶ್ರೀಗಂಧ ಮತ್ತು ರಕ್ತಚಂದನ ಕೃಷಿಯ ಕಡೆಗೆ ಹೆಚ್ಚು ಗಮನ ಕೊಟ್ಟರೆ ತಮ್ಮ ಆರ್ಥಿಕಮಟ್ಟವನ್ನು ಸುಧಾರಿಸಿಕೊಳ್ಳಬಹುದೆಂದು ತಿಳಿಸಿದರು. ನಂತರ ಗೀತಗಾಯನದ ಮೂಲಕ ಶಿಬಿರಾರ್ಥಿ ಮತ್ತು ಗ್ರಾಮಾಸ್ಥರನ್ನು ರಂಜಿಸಿ, ಶಿಬಿರಾಧಿಕಾರಿ ಹಾಗೂ ಗ್ರಾಮದ ಕೆಲವರಿಗೆ ಶ್ರೀಗಂಧ ಮತ್ತು ರಕ್ತಚಂದನದ ಗಿಡಗಳನ್ನು ಉಚಿತವಾಗಿ ವಿತರಿಸಿ ಪ್ರೋತ್ಸಾಹಿಸಿದರು.

ಅದೇ ದಿನ ಸಂಜೆ ಗ್ರಾಮದ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಶೋಭಾನೆ ಮತ್ತು ರಂಗಗೀತೆಗಳ ಗಾಯನ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಇದರ ನೇತೃತ್ವ ಮತ್ತು ತೀರ್ಪುಗಾರರಾಗಿ ಶ್ರೀ ಚಿಕ್ಕಮರೀಗೌಡ, ನಿವೃತ್ತ ಶಿಕ್ಷಕರು, ಖ್ಯಾತ ಆಕಾಶವಾಣಿ ಕಲಾವಿದರು, ರಾಜ್ಯ ಪ್ರಶಸ್ತಿ ಪುರಸ್ಕೃತರು ಆಗಮಿಸಿದ್ದರು. ಸ್ಪರ್ಧಿಗಳಿಗೆ ಕೆಲವು ಸೂಚನೆಗಳನ್ನು ನೀಡುವುದರ ಜೊತೆಗೆ ಸೋಬಾನೆ ಗೀತಗಾಯನ ಮಾಡಿ ಎಲ್ಲರನ್ನು ಚಕಿತಗೊಳಿಸಿದರು. ನಂತರ 3 ಮಹಿಳಾ ತಂಡಗಳು ಸೋಬಾನ ಗೀತೆಯಲ್ಲಿ ಸ್ಪರ್ಧಿಸಿದರೆ, 6 ಮಂದಿ ರಂಗಗೀತೆಗಳನ್ನು ಹಾಡಿ ಶಿಬಿರಾರ್ಥಿಗಳು ಮತ್ತು ಗ್ರಾಮಾಸ್ಥರನ್ನು ಹುಬ್ಬೇರಿಸುವಂತೆ ಮಾಡಿದರು. ಸ್ಪರ್ಧಿಸಿದ ಎಲ್ಲರಿಗೂ ಕಾರ್ಯಕ್ರಮದ ಕೊನೆಯ ದಿನದಂದು ಬಹುಮಾನ ವಿತರಣೆ ಮಾಡಲಾಯಿತು. ಪ್ರೊ. ಬಿ. ಸಿ. ಶಿವಕುಮಾರ್, ಪ್ರೊ. ಚನ್ನಪ್ಪ, ಪ್ರೊ. ಎಸ್. ಪಿ. ರಮೇಶ್, ಪ್ರೊ. ಡಿ. ಕೃಷ್ಣಯ್ಯ ಮೊದಲಾದ ಅಧ್ಯಾಪಕರು ಉಪಸ್ಥಿತರಿದ್ದರು.

**ಶಿಬಿರದ ಆರನೇ ದಿನ :**

ದಿನಾಂಕ: 25-03-2019 ನೇ ಸೋಮವಾರದಂದು ಬೆಳಗ್ಗೆ ಎಂದಿನಂತೆ ನಿತ್ಯಕರ್ಮಗಳನ್ನು ಮುಗಿಸಿದ ನಂತರ ಗ್ರಾಮದ ಪದವೀಧರರಾದ ಶ್ರೀ ಶಿವಕುಮಾರ್‌ರವರಿಂದ ಧ್ವಜಾರೋಹಣ ನೆರವೇರಿಸಿ, ರಾಷ್ಟ್ರಗೀತೆಯನ್ನು ಹಾಡಿ ಸ್ವಲ್ಪ ಹೊತ್ತು ವ್ಯಾಯಾಮವನ್ನು ಮಾಡಿ, ಬೆಳಗಿನ ಉಪಹಾರವನ್ನು ಮುಗಿಸಿ ಶ್ರಮಧಾನಕ್ಕೆ ಸಜ್ಜುಗೊಳಿಸಲಾಯಿತು. ಬೆಳಗ್ಗೆ 9-00

ಗಂಟೆಯಿಂದ ಮಧ್ಯಾಹ್ನ 1-30 ರವರೆಗೆ ಗ್ರಾಮದ ಶಾಲೆಯ ಆವರಣ, ನೀರಿನ ತೊಟ್ಟಿ, ಚರಂಡಿಯಿಂದ ತೆಗೆದ ಹೂಳನ್ನು ತೆರವುಗೊಳಿಸಿ ಸ್ವಚ್ಛಗೊಳಿಸಿ ಶ್ರಮಧಾನವನ್ನು ಮಾಡಿದರು. ನಂತರ ಮಧ್ಯಾಹ್ನದ ಉಪಹಾರವನ್ನು ಮುಗಿಸಿ ವಿಶ್ರಾಂತಿಯನ್ನು ಪಡೆದರು.

ಮಧ್ಯಾಹ್ನ 3-00 ಗಂಟೆಗೆ "ಸ್ತ್ರೀ ಸಬಲೀಕರಣದ ಅಗತ್ಯತೆ" ಎಂಬ ವಿಷಯಕ್ಕೆ ಪ್ರೊ. ರತ್ನಮ್ಮ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಪುರ ಉಪನ್ಯಾಸ ಮಾಲೆಯನ್ನು ನೀಡಿದರು. ನಂತರ ಶಿಬಿರಾರ್ಥಿಗಳ ಜೊತೆ ಬಿಸಿಬಿಸಿಯಾದ ಸಂವಾದ ಹಾಗೂ ಆರೋಗ್ಯಕರವಾದ ಚರ್ಚೆಯನ್ನು ನಡೆಸಿದ್ದು ವಿಶೇಷವಾಗಿತ್ತು. ನಂತರ ಚಹಾ ವಿರಾಮವನ್ನು ಮುಗಿಸಿ ಸಂಜೆಯ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಂಡರು.

ಸಂಜೆ 6-00 ಗಂಟೆಗೆ ಗ್ರಾಮೀಣ ಕಲೆ ಮತ್ತು ಸಂಸ್ಕೃತಿ ಎಂಬ ಶೀರ್ಷಿಕೆಯಡಿಯಲ್ಲಿ ಕಾರ್ಯಕ್ರಮ ಆರಂಭವಾಯಿತು. ಡಾ. ಶಿವರಾಂ, ನಿವೃತ್ತ ಪ್ರಾಂಶುಪಾಲರು ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಎಂ. ಗೋವಿಂದಪ್ಪ, ಸಂಯೋಜನಾಧಿಕಾರಿ, ಎಸ್. ಕರಿಯಪ್ಪ ಪಿ. ಜಿ. ಸೆಂಟರ್, ಡಾ. ವಿ. ಎನ್. ಮಂಜುನಾಥ್, ಕನ್ನಡ ಪ್ರಾಧ್ಯಾಪಕರು, ಪ್ರೊ. ತಮ್ಮಣ್ಣಗೌಡ, ವಾಣಿಜ್ಯಶಾಸ್ತ್ರ, ಲೆಫ್ಟಿನೆಂಟ್ ವಿಜೇಂದ್ರ, ಲೆಫ್ಟಿನೆಂಟ್ ಸೌಮ್ಯ ಹಾಗೂ ಗ್ರಾಮದ ಮುಖಂಡರು ಆಗಮಿಸಿದ್ದರು. ಡಾ. ಶಿವರಾಂರವರು ಮಾತನಾಡಿ ಇಂದಿನ ದೃಶ್ಯಮಾಧ್ಯಮಗಳ ಪ್ರಭಾವಗಳಿಂದ ಗ್ರಾಮೀಣ ಕಲೆ ಮತ್ತು ಸಂಸ್ಕೃತಿಗಳು ನಶಿಸುತ್ತಿದ್ದು, ಅದನ್ನು ಹಾಳಾಗದಂತೆ ನೋಡಿಕೊಳ್ಳುವ ಗ್ರಾಮದ ಯುವಕರು ಶ್ರಮಿಸಬೇಕೆಂದರು. ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವಾದ ಜನಪದಗಾಯನ ಮತ್ತು ಜಂಬೇ ಜಲಕ್ ವಾದ್ಯವನ್ನು ಶ್ರೀ ಹೊಳಸಾಲಯ್ಯ ದಾನವ್ ಮತ್ತು ತಂಡ ಕಾರ್ಯಕ್ರಮದ ಉದ್ದಕ್ಕೂ ನುಡಿಸಿ ಗೀತಗಾಯನ ಮಾಡಿ ಇಡೀ ಗ್ರಾಮದ ಜನರನ್ನು ವೇದಿಕೆಯತ್ತ ಬರುವಂತೆ ಮಾಡಿ ಎಲ್ಲರನ್ನು ರಂಜಿಸಿದರು. ಕಾರ್ಯಕ್ರಮ ಮುಗಿಯುವಷ್ಟರಲ್ಲಿ ರಾತ್ರಿ 10-00 ಗಂಟೆಯಾದ್ದರಿಂದ ಶಿಬಿರಾರ್ಥಿಗಳು ಉಪಹಾರವನ್ನು ಮುಗಿಸಿ ಶಿಬಿರದ ಸಂಜೆಯ ಕಾರ್ಯಕ್ರಮದ ಕೊನೆಯ ದಿನವಾದ್ದರಿಂದ ಫೈಯರ್ ಕ್ಯಾಂಪ್ ಅನ್ನು ಮಾಡಿ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಗ್ರಾಮಸ್ಥರು ಸಹ ಈ ಸಂದರ್ಭದಲ್ಲಿ ಉಪಸ್ಥಿತರಿದ್ದು, ಶಿಬಿರಾರ್ಥಿಗಳ ಜೊತೆ ಸಂಭ್ರಮವನ್ನು ಹಂಚಿಕೊಂಡರು.

**ಶಿಬಿರದ ಏಳನೇ ದಿನ :**

ದಿನಾಂಕ: 26-03-2019 ಮಂಗಳವಾರ ಶಿಬಿರದ ಕೊನೆ ದಿನವಾಗಿದ್ದು, ಬೆಳಗ್ಗೆ 8-00 ಗಂಟೆಗೆ ಗ್ರಾಮದ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಂತೆ ಶಿಬಿರಾರ್ಥಿಗಳು ಮನೆಮನೆಗೆ ಹೋಗಿ ರಂಗೋಲಿ ಸ್ಪರ್ಧೆಗೆ ಅಣಿಯಾಗುವಂತೆ ಪ್ರೇರೇಪಿಸಿ ರಂಗೋಲಿಯನ್ನು ಬಿಡಿಸಲು ಸಹಕರಿಸಿದರು. ಹಾಗೆಯೇ ಬೆಳಗಿನ ಧ್ವಜಾರೋಹಣ ಕಾರ್ಯಕ್ರಮವನ್ನು ಮಾಡಿ ಸಮಾರೋಪ ಸಮಾರಂಭದ ಕಾರ್ಯ ವೈಖರಿ ಬಗ್ಗೆ ತಿಳಿಸಿ ವೇದಿಕೆಯನ್ನು ಸಿದ್ಧ ಮಾಡಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಶಿಬಿರಾರ್ಥಿಗಳಿಗೆ ಶಿಬಿರಾಧಿಕಾರಿಗಳು ತಿಳಿಸಿದರು. ವೇದಿಕೆ ಸಿದ್ಧಗೊಳಿಸುವಷ್ಟರಲ್ಲಿ ರಂಗೋಲೆ ಸ್ಪರ್ಧೆಯ ನೇತೃತ್ವವನ್ನು ವಹಿಸಿದ್ದ ಪ್ರೊ. ರಾಗಿಣಿ ಮತ್ತು ಮಹಿಳಾ ಅಧ್ಯಾಪಕರ ತಂಡ ಮನೆಗಳ ಮುಂಭಾಗದಲ್ಲಿ ಬಿಡಿಸಿದ್ದ ರಂಗೋಲಿಯನ್ನು ವೀಕ್ಷಿಸಿ ಬಹುಮಾನಿತರನ್ನು ಆಯ್ಕೆ ಮಾಡಿಕೊಂಡರು. ಎನ್.ಎಸ್.ಎಸ್. ಸ್ವಯಂ ಸೇವಕರು ಗ್ರಾಮ ಸಮೀಕ್ಷೆಯನ್ನು ಮಾಡಿದರು. ಶಿಬಿರದ ಸಮಾರೋಪ ಸಮಾರಂಭ ಬೆಳಗ್ಗೆ 11-30 ಕ್ಕೆ ಸರಿಯಾಗಿ ಆರಂಭಗೊಂಡಿತ್ತು. ಇದರ ಅಧ್ಯಕ್ಷತೆಯನ್ನು ಗ್ರಾಮ ವಿದ್ಯಾ ಪ್ರಚಾರಕ ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಿ. ನಾಗರಾಜುರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ವೃಷಭೇಂದ್ರಮೂರ್ತಿ, ಪ್ರೊ. ದೇವರಾಜು, ಶ್ರೀಮತಿ ರಾಗಿಣಿ, ಪ್ರಾಂಶುಪಾಲರಾದ ಪ್ರೊ. ಎಂ. ವಿಕ್ರಂರವರು ಆಗಮಿಸಿದ್ದರು. ಶಿಬಿರದ ವರದಿಯನ್ನು ಉಪನ್ಯಾಸಕರಾದ ಶ್ರೀ ಜಗದೀಶ್‌ರವರು ಮಂಡಿಸಿದರು. ಶಿಬಿರದ ಬಗ್ಗೆ ಗ್ರಾಮಸ್ಥರು ಮತ್ತು ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ಎಲ್ಲರ ಮುಂದೆ ಹಂಚಿಕೊಂಡರು. ಸೋಬಾನೆ ಮತ್ತು ರಂಗ ಗೀತೆ ಹಾಗೂ ರಂಗೋಲೆ ಸ್ಪರ್ಧೆಯಲ್ಲಿ ಆಯ್ಕೆಯಾದ ಸ್ಪರ್ಧಿಗಳಿಗೆ ಬಹುಮಾನವನ್ನು ವೇದಿಕೆಯಲ್ಲಿದ್ದ ಗಣ್ಯರಿಂದ ವಿತರಿಸಲಾಯಿತು. ಹಾಗೆಯೇ ಶಿಬಿರದಲ್ಲಿ ರಕ್ತದಾನ ಮಾಡಿದ ಗ್ರಾಮದ ಯುವಕರು ಮತ್ತು ಶಿಬಿರಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಿ ಗೌರವಿಸಲಾಯಿತು. ವೇದಿಕೆಯಲ್ಲಿದ ಗಣ್ಯರನ್ನು ಪ್ರೊ. ಶೃತಿಯವರು ಸ್ವಾಗತಿಸಿದರೆ, ಶಿಬಿರಾಧಿಕಾರಿಯಾದ ಎ.ಪಿ. ಪ್ರಕಾಶ್ ಶಿಬಿರದ ಯಶಸ್ವಿಗೆ ಕಾರಣರಾದ ಎಲ್ಲರನ್ನು ಸ್ಮರಿಸಿ ವಂದಿಸಿದರು. ಮಧ್ಯಾಹ್ನ ಉಪಹಾರವನ್ನು ಮುಗಿಸಿ ಕಾರ್ಯಕ್ರಮಕ್ಕೆ

ತಂದಿದ್ದ ಎಲ್ಲಾ ವಸ್ತುಗಳನ್ನು ಟ್ರಾಕ್ಟರ್ ಮೇಲೆ ಏರಿ ಕಾಲೇಜಿಗೆ ಹಿಂದುರಿಗುವಷ್ಟರಲ್ಲಿ ಸಾಯಂಕಾಲ 5-00 ಗಂಟೆಯಾಗಿತ್ತು. ನಂತರ ಶಿಬಿರಾರ್ಥಿಗಳು ತಮ್ಮ ತಮ್ಮ ಮನೆಗಳ ಕಡೆಗೆ ತೆರಳಿದರು.

ಹೀಗೆ 7 ದಿನಗಳ ಕಾಲ ನಡೆದ ಶಿಬಿರವು ಚರಂಡಿ ಶುಚಿತ್ವ, ಆರೋಗ್ಯ ತಪಾಸಣೆ, ಸಸಿ ವಿತರಣೆ , ಪಶು ಆರೊಗ್ಯ ತಪಾಸಣೆ, ರಕ್ತದಾನ ಶಿಬಿರ, ಕಾನೂನು ಅರಿವು, ಸರ್ಕಾರಿ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳು, ಶಾಲೆ, ದೇವಸ್ಥಾನ ಮತ್ತು ನೀರಿನ ಕೊಳಗಳ ಸ್ವಚ್ಛತೆಯ ಅರಿವು, ಕೃಷಿ, ರೇಷ್ಮೆ ಕೃಷಿ, ಅರಣ್ಯ ಕೃಷಿ, ಸಾಂಸ್ಕೃತಿಕ ಕಾರ್ಯಕ್ರಮಗಳು ಮೊದಲಾದ ಜನಜಾಗೃತಿ ಕಾರ್ಯಕ್ರಮಗಳನ್ನು ಒಳಗೊಂಡಿತ್ತು. ಶಿಬಿರದ ಯಶಸ್ವಿಗೆ ಕಾರಣರಾದ ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಘಟಕದ ಸಂಯೋಜನಾಧಿಕಾರಿ ಮತ್ತು ಸಿಬ್ಬಂದಿ, ಗ್ರಾಮ ವಿದ್ಯಾ ಪ್ರಚಾರಕ ಸಂಘದ ಪದಾದಿಕಾರಿಗಳು, ಅರೆಹೊಸಹಳ್ಳಿ ಗ್ರಾಮಸ್ಥರು ಮತ್ತು ಅಲ್ಲಿನ ಸಂಘ-ಸಂಸ್ಥೆಗಳು, ಅರೆಕಟ್ಟೆದೊಡ್ಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಮತ್ತು ಕಾಲೇಜಿನ ಬೋಧಕ / ಭೋಧಕೇತರ ಸಿಬ್ಬಂದಿ ವರ್ಗ, ಸ್ಥಳೀಯ ಶಾಲಾ ಸಿಬ್ಬಂದಿ ವರ್ಗ ವೈದ್ಯಾಧಿಕಾರಿಗಳು ಸರ್ಕಾರದ ವಿವಿಧ ಇಲಾಖೆಯ ಅಧಿಕಾರಿಗಳು, ಮಾಧ್ಯಮದವರು, ಹಿರಿಯ ಎನ್.ಎಸ್.ಎಸ್. ವಿದ್ಯಾರ್ಥಿಗಳು, ಲಯನ್ಸ್ & ಆಯೋ ಕ್ಲಬ್ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರನ್ನು ಸ್ಮರಿಸಿ ಎನ್.ಎಸ್.ಎಸ್. ಘಟಕವು ಧನ್ಯವಾದಗಳನ್ನು ಅರ್ಪಿಸುತ್ತದೆ.

ವಂದನೆಗಳೊಂದಿಗೆ.

ಎನ್.ಎಸ್.ಎಸ್. ಅಧಿಕಾರಿಗಳು ಪ್ರಾಂಶುಪಾಲರು.